ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 27/3/21

# ಒಂದು ರಾಷ್ಟ್ರ ಒಂದು ಎಲೆಕ್ಷನ್; ಬದಲಾವಣೆಗೆ ನಾಂದಿ




■ ಡಾ|ಹರೀಶ್ ರಾಮಸ್ವಾಮಿ
ರಾಯಚೂರು ವಿವಿ ಕುಲಪತಿ,
ಹಾಗೂ
■ ಡಾ|ಕಮಲಾಕ್ಷಿ ಜಿ. ತಡಸದ್
ಪ್ರಾಧ್ಯಾಪಕರು ರಾಣಿ ಚೆನ್ನಮ್ಮ ವಿವಿ ಬೆಳಗಾವಿ

ರಾಷ್ಟ್ರದ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಕೆಲವೊಮ್ಮೆ ಅನವಶ್ಯಕ ಚರ್ಚೆಗಳು ಕಾಲಹರಣಕ್ಕೆ ಕಾರಣವಾಗುತ್ತದೆ. 'ಒಂದು ರಾಷ್ಟ್ರ ಒಂದು ಚುನಾವಣೆ' ಈ ಚರ್ಚೆಗಳಿಂದ ಹೊರತಾಗಿರಬೇಕಾದ್ದು. ಹಾಗಂದಾಕ್ಷಣ ಇದು ಪ್ರಜಾಪ್ರಭುತ್ವಿಕ ವಿರೋಧಿ ನಿಲುವಲ್ಲ.

ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳನ್ನು ಏಕಕಾಲಿಕವಾಗಿ ನಡೆಸಬೇಕೆಂಬ ಚರ್ಚೆ ಹೊಸತೇನಲ್ಲ. 1967ರವರೆಗೆ ಭಾರತದಲ್ಲಿ ಚುನಾವಣೆಗಳು ಇದೇ ದಿಸೆಯಲ್ಲಿ ನಡೆದಿದ್ದವು. 1968-69ರ ಕಾಲದಲ್ಲಿ ಕೆಲವು ವಿಧಾನಸಭೆಗಳ ವಿಸರ್ಜನೆಯಿಂದ 1970ರಲ್ಲಿ ಲೋಕಸಭೆಯ ವಿಸರ್ಜನೆ ಈ ವ್ಯವಸ್ಥೆಯ ದಿಕ್ಕನ್ನು ಬದಲಿಸಿತು.

ಚುನಾವಣಾ ಆಯೋಗದ 1983ರ ವಾರ್ಷಿಕ ವರದಿ, 2014 ಬಿಜೆಪಿ ಚುನಾವಣಾ ಪ್ರಣಾಳಿಕೆ, 2016ರಲ್ಲಿ ಮೋದಿ ಹೇಳಿಕೆ, 2017ರಲ್ಲಿ ನೀತಿ ಆಯೋಗದ ವರ್ಕಿಂಗ್ ಪೇಪರ್, 2018ರ ಲಾ ಕಮಿಷನ್‌ನ ವರ್ಕಿಂಗ್ ಪೇಪರ್ ಎಲ್ಲವೂ ಈ ಬಗ್ಗೆ ತಮ್ಮ ತಿಳಿವಳಿಕೆಯನ್ನು ಪ್ರಕಟಪಡಿಸಿವೆ. ಈ ಚರ್ಚೆಯಲ್ಲಿರುವುದು ಕೇವಲ ಮೂರು ಅಂಶಗಳು; ಒಂದು ಈ ರೀತಿಯ ಬದಲಾವಣೆಯು (Procedural) ಪ್ರಕ್ರಿಯಾತ್ಮಕ ಪ್ರಜಾಪ್ರಭುತ್ವಕ್ಕೆ ಮಹತ್ವ ನೀಡುತ್ತದೆ. ಎರಡನೆಯದು ಈ ಮೂಲಕ ಅಸ್ತಿತ್ವಸೂಚಕ (Substantive) ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗುತ್ತದೆ. ಮೂರನೆಯದಾಗಿ ಈ ಮೂಲಕ ಏಕಪಕ್ಷ ಹಾಗೂ ಏಕ ವ್ಯಕ್ತಿಯ ಆಡಳಿತ ಮತ್ತೊಮ್ಮೆ ಅಪಥ್ಯ ಸಾಧಿಸುತ್ತದೆ ಎಂಬುದು.

ಮೊದಲಿಗೆ ಭಾರತದಲ್ಲಿ ಉಳಿಗಮಾನ್ಯ ರಾಜಕೀಯ ವ್ಯವಸ್ಥೆ ಸುಧಾರಿಸುವ ಹಂತದಲ್ಲಿ ಚುನಾವಣೆಗಳು ಈ ಪ್ರಕ್ರಿಯಾತ್ಮಕ ಪ್ರಜಾಪ್ರಭುತ್ವದ ತಳಹದಿಯಾಗಿದೆ. ಇದು ಅವಶ್ಯಕ. ಆದರೆ, ಇದೇ ಪ್ರಜಾಪ್ರಭುತ್ವವಲ್ಲ, ಮರಗಳಿದ್ದರೆ ಕಾಡು. ಆದರೆ ಮರವೇ ಕಾಡಲ್ಲ ಎಂಬಂತೆ ಚುನಾವಣೆಗಳು ಪ್ರಜಾಪ್ರಭುತ್ವದ ಆರೋಗ್ಯ ಸೂಚಕಗಳು. ಪ್ರತಿ ಐದು ವರ್ಷಗಳಿಗೊಮ್ಮೆ ಇದು ನಡೆದರೆ ಮತದ ಹಕ್ಕನ್ನು ಚಲಾಯಿಸುವ ಜನತೆಯ ವೈಚಾರಿಕತೆ ಇದರಿಂದ ಪ್ರತಿಬಿಂಬಿಸಲ್ಪಡುತ್ತದೆ. ಪ್ರಜಾಪ್ರಭುತ್ವದ ಉಳಿವಿಗೆ ಇದು ಮೂಲ ಮಂತ್ರವಾಗುತ್ತದೆ.

ಎರಡನೆಯದಾಗಿ ಅಸ್ತಿತ್ವಸೂಚಕ (Substantive) ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗುವುದು. ಇಲ್ಲಿ ವಿಧಾನ ಹಾಗೂ ಲೋಕಸಭೆಗಳ ಕಾಲಮಿತಿಯನ್ನು ಐದು ವರ್ಷಗಳಿಗೆ ಶಾಶ್ವತವಾಗಿ ಮಾಡಿ, ಈ ಕಾಲದಲ್ಲಿ ಅಸ್ತಿತ್ವದಲ್ಲಿನ ಸರ್ಕಾರಗಳು ವಿಶ್ವಾಸಮತದಲ್ಲಿ ಸೋತರೆ, ಪಕ್ಷಾಂತರ, ಸಂವಿಧಾನಿಕ ಕಾರ್ಯಗಳ ಕುಸಿಯುವಿಕೆ ಹಾಗೂ ಇನ್ನಿತರ ಕಾರಣಗಳಿಂದ ಕಾಲಾವಧಿ ಪೂರ್ಣಗೊಳಿಸದ ಸಂದರ್ಭದಲ್ಲಿ ರಾಜ್ಯವನ್ನು ರಾಷ್ಟ್ರಾಧ್ಯಕ್ಷರ ಆಡಳಿತ, ರಾಜ್ಯಪಾಲರ ಆಡಳಿತದ ಅಡಿಯಲ್ಲಿ ತರುವ ವ್ಯವಸ್ಥೆ ಪ್ರಜಾಪ್ರಭುತ್ವ ವಿರೋಧಿ ಎಂಬುದು ಈ ಚರ್ಚೆ ಮಾಡುವ ಬುದ್ಧಿವಂತರು ಈಗಾಗಲೇ ಈ ನಿಟ್ಟಿನಲ್ಲಿ ಆದ ಹಲವಾರು ಸರ್ಕಾರದ ಅಪ್ರತಿನಿಧಿತ್ವತೆ ಬಗ್ಗೆ ಏನು ಮಾಡಿದ್ದಾರೆ. ಬೊಮ್ಮಾಯಿ ಕೇಸ್'ನಲ್ಲಿ ಈ ವಿಚಿತ್ರ ಬೆಳವಣಿಗೆಗೆ ಪರಿಹಾರ ಇದೆ ಎಂದುಕೊಂಡವರಿಗೂ ಇದು ತಿಳಿಯಲಾರದ ಒಗಟಾಗಿದೆ.

ಇಲ್ಲಿ ಡಾ|ಬಿ.ಆರ್.ಅಂಬೇಡ್ಕರ್ ಅವರು ಹೇಳಿದಂತೆ ಸಂವಿಧಾನದ ತಪ್ಪಿಲ್ಲ. ಅದನ್ನು ತಪ್ಪಾಗಿಸುವಂತೆ ನಡೆದುಕೊಳ್ಳುವ ರಾಜಕಾರಣಿಗಳ ಜಾಣತನಕ್ಕೆ ವೈಚಾರಿಕತೆ ಹೊಂದಿರುವ ಮತದಾರನ ಪ್ರತಿಕ್ರಿಯೆಯಾದರೂ ಏನು? ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಹಣ ಮತ್ತಿತರ ಆಮಿಷಕ್ಕೆ ಬಲಿ ಬಿದ್ದು ಮತಗಳನ್ನೇ' ಮಾರಿಕೊಳ್ಳುವ ಈ ಜನತೆಗೆ, ಪಕ್ಷಗಳಿಗೆ ಇದರಿಂದ ಮುಕ್ತಿ ಬೇಡವೇ? ಅಥವಾ ಅಸ್ತಿತ್ವ ಸೂಚಕ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಜಾಪ್ರಭುತ್ವದ ಬುನಾದಿಯನ್ನೇ ಭ್ರಷ್ಟಗೊಳಿಸುವುದೇ ಸರಿಯೇ? ಚಿಂತಿಸಿ.

ಇನ್ನು ಮೂರನೆಯದಾಗಿ ಏಕಪಕ್ಷ-ಏಕವ್ಯಕ್ತಿಯ ಪ್ರಜಾಪ್ರಭುತ್ವದ ಬಗ್ಗೆ ಭಯ ಹುಟ್ಟಿಸುವ ನಾಯಕರು ಅಧಿಕಾರದಲ್ಲಿ ಅದರ ಚಲಾವಣೆಯಲ್ಲಿ ಅಡೆತಡೆ ಸಮ ತೂಕ (ಚೆಕ್ಸ್ ಆ್ಯಂಡ್ ಬ್ಯಾಲೆನ್ಸ್) ಬಗ್ಗೆ ಓದಿಕೊಳ್ಳಬೇಕು. ಮಾಂಟೆಸ್ಕ್ ಇದನ್ನೇ ತನ್ನ ಥಿಯರಿ ಆಫ್ ಸೆಪರೇಷನ್ ಆಫ್ ಪವರ್ಸ್'ನಲ್ಲಿ ಹೇಳಿ-ಯಾವ ವ್ಯಕ್ತಿಯೂ ಏಕಪಕ್ಷವಾಗಿ, ವ್ಯಕ್ತಿಯಾಗಿ ಪ್ರಜಾಪ್ರಭುತ್ವವನ್ನು ದುರುಪಯೋಗ ಪಡಿಸದಂತೆ ಪ್ರಜಾಪ್ರಭುತ್ವದ ಸರ್ವಾಧಿಕಾರವನ್ನು ಜನತೆಗೆ' ಸಮರ್ಪಿಸಲಾಗಿದೆ ಹಾಗೂ ಅಧಿಕಾರ ವಿಭಜನೆ ಮಾಡಲಾಗಿದೆ ಎಂದಿದ್ದಾರೆ. ಹೀಗಾಗಿ ನಮ್ಮ ಒಳಿತಿಗಾಗಿ ನಾವು ಬದಲಾವಣೆ ತಂದುಕೊಳ್ಳಬೇಕು.

> ಒಂದು ರಾಷ್ಟ್ರ-ಒಂದು ಚುನಾವಣೆ' ಕೂಗು ಕೂಡಾ ಆಗು-ಹೋಗುಗಳ ಬಗ್ಗೆ ಚಿಂತನೆ-ಚರ್ಚೆ, ಪರ-ವಿರೋಧಗಳನ್ನು ಪರಾಮರ್ಶಿಸಬೇಕು. ಆದರೆ ಹಾಗೆ ಮಾಡುವುದಷ್ಟೇ ಪ್ರಜಾಪ್ರಭುತ್ವದ ತತ್ವ, ಮೂಲಾರ್ಥ ಎಂದುಕೊಂಡರೆ ಅದು ತಪ್ಪಾಗುತ್ತದೆ. ಯಾವುದೇ ಚರ್ಚೆ ಇತಿ-ಮಿತಿ ಹೊಂದಿದ್ದು, ನಿರ್ಧಾರ ತೆಗೆದುಕೊಳ್ಳಲು ಪೂರಕವಾಗಿರಬೇಕು.

ಯಾವುದೇ ಬದಲಾವಣೆಯು ಪ್ರಯತ್ನ ಟೀಕೆಗಳಿಂದ ಮುಕ್ತಿಹೊಂದಿರಲಾರದು. ಹಾಗೆಯೇ ಈ ಒಂದು ರಾಷ್ಟ್ರ-ಒಂದು ಚುನಾವಣೆ' ಕೂಗು ಕೂಡಾ ಆಗು-ಹೋಗುಗಳ ಬಗ್ಗೆ ಚಿಂತನೆ-ಚರ್ಚೆ, ಪರ-ವಿರೋಧಗಳನ್ನು ಪರಾಮರ್ಶಿಸಬೇಕು. ಆದರೆ ಹಾಗೆ ಮಾಡುವುದಷ್ಟೇ ಪ್ರಜಾಪ್ರಭುತ್ವದ ತತ್ವ ಮೂಲಾರ್ಥ ಎಂದುಕೊಂಡರೆ ಅದು ತಪ್ಪಾಗುತ್ತದೆ. ಯಾವುದೇ ಚರ್ಚೆ ಇತಿ-ಮಿತಿ ಹೊಂದಿದ್ದು ನಿರ್ಧಾರ ತೆಗೆದುಕೊಳ್ಳಲು ಪೂರಕವಾಗಿರಬೇಕು. ಹಾಗಾಗದ ಪಕ್ಷದಲ್ಲಿ ಕೊನೆಯೇ ಇಲ್ಲದ ಚರ್ಚೆ ಬದಲಾವಣೆಯನ್ನು ಸಾಧಿಸಲಾಗದಂತಾಗಿಸುತ್ತದೆ.

ಈ ಮೇಲಿನ ಇಡೀ ಚರ್ಚೆಯ ಮೂಲಾಂಶ ಪ್ರಜಾಪ್ರಭುತ್ವ ತನ್ನಲ್ಲಿ ತಾನೇ ಪ್ರಾಯೋಗಿಕವಾಗಿ ಬದಲಾವಣೆಗೆ ಪೂರಕವಾಗಿ ಶ್ರಮಿಸದಿದ್ದರೆ, ಅದರೊಳಗಿನ ತಪ್ಪುಗಳು ಇಡೀ ಪ್ರಜಾಪ್ರಭುತ್ವದ ಬುನಾದಿಯನ್ನೇ ನಾಶಗೊಳಿಸುತ್ತದೆ ಎಂಬುದನ್ನು ತಿಳಿಸುವುದಾಗಿದೆ. ಪ್ರಸ್ತುತದಲ್ಲಿ ಭಾರತದ ಪ್ರಜಾಪ್ರಭುತ್ವವು ಚುನಾವಣೆಗಳಿಂದ ಮಾತ್ರ (dominate) ಬಲಿಷ್ಠವಾಗಿದೆ ಎಂಬ ಭಾವನೆಯಡಿ ಅದರ ಅಂತರ್ಯದಲ್ಲಿನ ಉತ್ತಮ ಆಡಳಿತ, ಅಭಿವೃದ್ಧಿ, ಜನಪರತೆ, ಆರ್ಥಿಕಾವಕಾಶಗಳು, ಸದಾವಕಾಶಗಳು ಬೆಳವಣಿಗೆ ಎಂಬ ಅಂಶಗಳು ಮಾಸಿ ಹೋಗಿವೆ. ಹಾಗಾಗಿ ಜನರ ಭಾವನೆಯಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಬೇಸರಿಕೆ, ಬದಲಾಯಿಸಲಾಗದ ವ್ಯವಸ್ಥೆ ಭ್ರಷ್ಟತೆಯ ಆಗರ ಹಾಗೂ ಯಾವುದೇ ಬದಲಾವಣೆಯು ನಕಾರಾತ್ಮಕ ಎಂಬ ಭಾವ ಮೂಡಿದೆ. ಇದು ಸರಿಯಲ್ಲ. ಪ್ರಜಾಪ್ರಭುತ್ವವೇ ಒಂದ ಪ್ರಯೋಗ ಅನ್ನೋದನ್ನು ನಾವು ಮರೆಯಬಾರದು.

ಭೂಪೇಂದ್ರ ಯಾದವ, ಅಮಿತಾಬ್ ಕಾಂತ್ ಇವರೆಲ್ಲರು ಹೇಳುವಂತೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಕಾರಣಕ್ಕಾಯೇ ಅಭಿವೃದ್ಧಿ ಕುಂಠಿತವಾಗುವುದು ಸರಿಯಾ ಬೆಳವಣಿಗೆಯಲ್ಲ- ಇದನ್ನು ಚರ್ಚಿಸಬೇಕಿಲ್ಲ.

ಆದರೆ, ಈ ಬದಲಾವಣೆ ಹೇಳಿದಷ್ಟು ಸುಲಭವ ಸಂವಿಧಾನದ 83ನೇ ವಿಧಿ, 85ನೇ ವಿಧಿ, 172ನೇ ವಿಧಿ, 174ನ ವಿಧಿ, 356ನೇ ವಿಧಿಗಳಲ್ಲಿ ಹಾಗೂ ಜನಪ್ರತಿನಿಧಿ ಕಾಯ್ದೆಗಳ ತಿದ್ದುಪಡಿ ತರದೆ ಈ ಬದಲಾವಣೆ ಸಾಧ್ಯವಿಲ್ಲ. ಸಂವಿಧಾನ ನಮನೀಯತೆ ಇದಕ್ಕೆ ಪೂರಕವಾಗಿದ್ದರೂ ಸವಾಲುಗಳ ಸಂಯುಕ್ತ ವ್ಯವಸ್ಥೆಯ ಮೇಲೆ ಇದರ ಪರಿಣಾಮವೇನು ಐದು ವರ್ಷಗಳ ಗಡಸು ಕಾಲಾವಧಿ ತೀರ್ಮಾನ ಆಗುಹೋಗುಗಳು ಏನು? ಭಾರತದ ಜನಾದೇಶ ಯಾವುದನ್ನು ಬಯಸುತ್ತದೆ- ಈ ಬದಲಾವಣೆ ದೇಶ ಅಭಿವೃದ್ಧಿಗೆ ಸಾಧಕವೇ? ಎಂಬೆಲ್ಲ ಚರ್ಚೆಗಳ ಸಾಧಕ-ಬಾಧಕ ಮುಕ್ತ ಚರ್ಚೆ ಅವಶ್ಯಕವೆಂಬುದನ್ನು ಎಲ್ಲರು ಮನಗಂಡಿರಲೇಬೇಕು.

ವ್ಯಕ್ತಿಗಿಂತ- ಸಮುದಾಯ, ಸಮುದಾಯಕ್ಕಿಂತ-ಹಳ್ಳಿ ನಗರ, ಹಳ್ಳಿ-ನಗರಕ್ಕಿಂತ- ರಾಜ್ಯ, ರಾಜ್ಯಕ್ಕಿಂತಾ ಮಿಗಿಲಾದದ ರಾಷ್ಟ್ರವೆಂಬ ಪರಿಕಲ್ಪನೆ ಇರುವ ಭಾರತೀಯರಾದ ನಾ ಕಾಲಹರಣ ಮಾಡುವ ಚರ್ಚೆಗಿಂತಾ ಬದಲಾವಣೆ ಒಳಿತಿಗಾಗಿ ಆಗಬಾರದೇಕೆ ಎಂಬ ವೈಜ್ಞಾನಿಕ ಮನೋಭಾವ ಯಲ್ಲಿ ಮುಂದಾಲೋಚನೆ ಹೊಂದುವುದು ಅವಶ್ಯ ಮತದಾರ ಸೋಲಿಸಿರುವ ಪ್ರಜಾಪ್ರಭುತ್ವವನ್ನು ಮತದಾರ ಮೂಲಕವೇ ಗೆಲ್ಲಿಸಬೇಕಿದೆ. ಹಾಗಾಗಿ ಈ ಬದಲಾವಣೆ ಅವರದೇ ಮತಬೇಕಿದೆ. ಸಂಯುಕ್ತತೆಯ ತತ್ವ-ಆಚರಣೆಗೆ ಧ ಬಾರದಂತೆ ಈ ಬದಲಾವಣೆ ಬರುವುದರಿಂದ ಈ ಬದಲಾವ ಆಗಲೇಬೇಕಲ್ಲವೇ? ಅಭಿವೃದ್ಧಿಯೆಡೆಗೆ ಭಾರತ ಸಾಗಲೇಬೇಕಲ್ಲವೇ. ಭಯದ ಹೆಸರಿನಲ್ಲಿ ಬದುಕುವ ಬದಲಾವಣೆಯನ್ನೇ ಬಯಸದ ಸಮಾಜ ಏಳಿಗೆ ಕಾಣುವುದು ಸಾಧ್ಯವೇ?

ಒಂದು ರಾಷ್ಟ್ರ ಒಂದು ಚುನಾವಣೆ' ಬದಲಾವಣೆಗೆ ನಾಂದಿ ಎಂಬುದನ್ನು ಮರೆಯದೇ ಮುಂದೆ ಸಾಗುವುದೇ ಭಾರತ ಭವಿತವ್ಯವೆಂದು ನಮ್ಮ ಅನಿಸಿಕೆ. ಟೀಕೆಗೆ ಆಹ್ವಾನವಿದೆ-ಮು ಚರ್ಚೆಗೆ ಅವಕಾಶವಿದೆ. ಅದೇ ಪ್ರಜಾಪ್ರಭುತ್ವದ ಜೀವಾಳ. ಬ ಬದಲಿಸೋಣ-ಬದಲಾವಣೆಯ ಭಾಗವಾಗೋಣ.